# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1417

**ಸದಸ್ಯರ ಹೆಸರು** : ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ)

**ಉತ್ತರಿಸುವ ದಿನಾಂಕ** : 22.08.2025.

**ಉತ್ತರಿಸುವವರು** : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬರುವ ಒಟ್ಟು ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಒಟ್ಟು 69922 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಸದರಿ ಕೇಂದ್ರಗಳಲ್ಲಿ 66599 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 59497 ಅಂಗನವಾಡಿ ಸಹಾಯಕಿಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. |
| ಆ) | ಈ ಅಂಗನವಾಡಿ ನೌಕರರಿಗೆ ಸರ್ಕಾರ ನೀಡುತ್ತಿರುವ ವೇತನ ಎಷ್ಟು; ಈಗ ನೀಡುತ್ತಿರುವ ವೇತನವು ಬಹಳ ಕಡಿಮೆ ಇರುವುದರಿಂದ ಇದರ ಸಂಬಳವನ್ನು ಹೆಚ್ಚಳ ಮಾಡಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ; | 2025-26 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಹೆಯಾನ ರೂ. 1000/- ಹಾಗೂ ಸಹಾಯಕಿಯರಿಗೆ ರೂ. 750/- ಹೆಚ್ಚಿಸಲಾಗಿರುತ್ತದೆ.<br><br>ಸದರಿ ಮೊತ್ತವನ್ನು ಒಳಗೊಂಡಂತೆ ಪ್ರಸ್ತುತ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಹೆಯಾನ ರೂ. 12000 ರಿಂದ ರೂ.12500 ರವರೆಗೆ ಹಾಗೂ ಸಹಾಯಕಿಯರಿಗೆ ರೂ.7000/- ಯಿಂದ ರೂ. 7500/- ರಷ್ಟು ಗೌರವಧನವನ್ನು ಪಾವತಿಸಲಾಗುತ್ತಿದೆ. |
| ಇ) | ಸರ್ಕಾರದಿಂದ ಈ ಅಂಗನವಾಡಿ ಮಕ್ಕಳಿಗೆ ದಿನನಿತ್ಯ ನೀಡುತ್ತಿರುವ ಆಹಾರ ಪದಾರ್ಥಗಳು ಯಾವುವು; ಇವುಗಳು ಯಾವ ಗುಣಮಟ್ಟವುಳ್ಳ ಕಂಪನಿಗಳಿಗೆ ಸೇರಿರುತ್ತದೆ; | ಸರ್ಕಾರದಿಂದ ಈ ಅಂಗನವಾಡಿ ಮಕ್ಕಳಿಗೆ ದಿನನಿತ್ಯ ನೀಡುತ್ತಿರುವ ಆಹಾರ ಪದಾರ್ಥಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ಎಂ.ಎಸ್.ಪಿ.ಸಿ.ಗಳಿಂದ ಪೂರೈಸಲಾಗುತ್ತಿದೆ. |
| ಈ) | ಸರ್ಕಾರದಿಂದ ಅಂಗನವಾಡಿ ಕೇಂದ್ರದ ಮಕ್ಕಳಿಗೆ ನೀಡುತ್ತಿರುವ ಆಹಾರ ಪದಾರ್ಥಗಳು ಬಹಳ ಕಡಿಮೆಯಾಗಿರುವುದರಿಂದ ಸರ್ಕಾರ ಇನ್ನು ಉತ್ತಮ ಗುಣಮಟ್ಟವುಳ್ಳ ಹೆಚ್ಚು ಹೆಚ್ಚು ಆಹಾರ ಪದಾರ್ಥಗಳನ್ನು ನೀಡಲು ಯಾವ ಕ್ರಮವನ್ನು ಕೈಗೊಂಡಿದೆ? | 2017 ರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ನಿಗದಿಗೊಳಿಸಿರುವ ಘಟಕ ವೆಚ್ಚದ ಮಿತಿಯಲ್ಲಿ ಅಂಗನವಾಡಿ ಮಕ್ಕಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ನಿಗದಿತ ಕ್ಯಾಲೋರೀಸ್, ಪ್ರೋಟೀನ್ ಒಳಗೊಂಡ ಅಗತ್ಯ ಪ್ರಮಾಣದ ಪೂರಕ ಪೌಷ್ಟಿಕ ಆಹಾರವನ್ನು ಪೂರೈಸಲಾಗುತ್ತಿದೆ.<br><br>ಅಂಗನವಾಡಿ ಕೇಂದ್ರಗಳಲ್ಲಿ ಉತ್ತಮ ಗುಣಮಟ್ಟದ ಪೂರಕ ಪೌಷ್ಟಿಕ ಆಹಾರ ಸರಬರಾಜು ಮಾಡಲು ಈ ಕೆಳಕಂಡಂತೆ ಕ್ರಮವಹಿಸಲಾಗುತ್ತಿದೆ:<br><br>i. ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳಿಗೆ ಆಹಾರವನ್ನು ವಿತರಿಸುವ ಮುನ್ನ ಗುಣಮಟ್ಟದ ಪರೀಕ್ಷೆಯನ್ನು NABL (National Accreditation Board for Testing and Calibration Laboratories)ನಿಂದ ಮಾನ್ಯತೆ ಪಡೆದ ಪ್ರಯೋಗಾಲಯಗಳ ಮೂಲಕ ಪ್ರತಿ ಮಾಹೆ ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ. |

| | | |
|---|---|---|
| | | ii. ತದನಂತರ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸುತ್ತಾರೆ. ಆಹಾರ ವಿತರಿಸುವ ಮುನ್ನ ಹಾಗೂ ವಿತರಿಸಿದ ನಂತರ ಎಲ್ಲಾ ಹಂತಗಳಲ್ಲಿ ಆಹಾರ ಸಾಮಗ್ರಿಗಳ ಮಾದರಿಗಳ ಗುಣಮಟ್ಟ ಪರೀಕ್ಷೆ ನಡೆಸಲಾಗುತ್ತಿದೆ.<br><br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ FSSAI ಪ್ರಯೋಗಾಲಯಗಳು, random ಆಗಿ ಅಂಗನವಾಡಿ ಕೇಂದ್ರಗಳಲ್ಲಿ ಪೂರಕ ಪೌಷ್ಟಿಕ ಆಹಾರದ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷಿಸುತ್ತಿವೆ. 2024-25ನೇ ಸಾಲಿನಲ್ಲಿ 1,329 ಮಾದರಿಗಳನ್ನು ಮತ್ತು 2025-26ನೇ ಸಾಲಿನಲ್ಲಿ ಈವರೆವಿಗೆ 674 ಪೂರಕ ಪೌಷ್ಟಿಕ ಆಹಾರದ ಮಾದರಿಗಳನ್ನು ಅಂಗನವಾಡಿ ಕೇಂದ್ರಗಳಿಂದ ಸಂಗ್ರಹಿಸಿ ಪರೀಕ್ಷೆ ನಡೆಸಲಾಗಿದೆ. ಆದರೆ, ಈವರೆಗೆ ಯಾವುದೇ ಪ್ರತಿಕೂಲ ವರದಿಗಳು ಸ್ವೀಕೃತವಾಗಿರುವುದಿಲ್ಲ. |

**ಸಂಖ್ಯೆ: ಮಮಇ 241 ಐಸಿಡಿ 2025**

**(ಲಕ್ಷ್ಮಿ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

# ಅನುಬಂಧ

## ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಒದಗಿಸುತ್ತಿರುವ ಆಹಾರದ ವಿವರ

| ಫಲಾನುಭವಿಗಳ ವಿವರ | ಆರೋಗ್ಯ ಸ್ಥಿತಿ | ಘಟಕ ವೆಚ್ಚ (ರೂ.ಗಳಲ್ಲಿ) | | | ರಾಜ್ಯ ಹೆಚ್ಚುವರಿ ವೆಚ್ಚ (ತಿಂಗಳಿಗೆ) (ರೂ.ಗಳಲ್ಲಿ) | | | ಒದಗಿಸಲಾಗುತ್ತಿರುವ ಆಹಾರ ಪದಾರ್ಥಗಳ ವಿವರ | | | | | | |
|---|---|---|---|---|---|---|---|---|---|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು | ಕೋಳಿ ಮೊಟ್ಟೆ | ಹಾಲು | ಒಟ್ಟು (ರೂ.ಗಳಲ್ಲಿ) | ಪೂರಕ ಪೌಷ್ಠಿಕ ಆಹಾರ | ಹೆಚ್ಚುವರಿ | ಸೃಷ್ಟಿ ಯೋಜನೆಯಡಿ ಕೋಳಿಮೊಟ್ಟೆ | ಹೆಚ್ಚುವರಿ | ಕ್ಷೀರಭಾಗ್ಯ ಯೋಜನೆಯಡಿ ಹಾಲು | ಹೆಚ್ಚುವರಿ | ಇತರೆ |
| 6 ತಿಂಗಳಿಂದ 3 ವರ್ಷದ ಮಕ್ಕಳು | ಸಾಮಾನ್ಯ ಪೌಷ್ಠಿಕ ಮಗು | 4.00 | 4.00 | 8.00 | - | 5.12*20 ದಿನ | 102.40 | 120 ಗ್ರಾಂ. ನಂತೆ ಪುಷ್ಟಿ ಪುಡಿಯನ್ನು ಪ್ರತಿ ದಿನದಂತೆ ಒಟ್ಟು 3.00 ಕೆ.ಜಿ. ಮನೆಗೆ ವಿತರಿಸಲಾಗುತ್ತಿದೆ. | ---- | --- | ---- | ಪ್ರತಿ ದಿನಕ್ಕೆ 15 ಗ್ರಾಂ. ನಂತೆ ವಾರಕ್ಕೆ 5 ದಿನ ಹಾಲಿನ ಪುಡಿ (300 ಗ್ರಾಂ. ಪ್ರತೀ ಮಾಹೆಗೆ ಮನೆಗೆ ವಿತರಣೆ) | --- | ಕಬ್ಬಿಣಾಂಶದ ಮಾತ್ರೆ, ಜಂತು ಹುಳುವಿನ ಮಾತ್ರೆ |
| | ಸಾಧಾರಣ ಅಪೌಷ್ಠಿಕ ಮಗು | 4.00 | 4.00 | 8.00 | 6.00 * 12 ದಿನ (72/-) | 5.12 * 20 + 12 ದಿನ (163.84/-) | 235.84 | | ---- | --- | ವಾರಕ್ಕೆ 03 ದಿನ | ಪ್ರತಿ ದಿನಕ್ಕೆ 15 ಗ್ರಾಂ. + ವಾರಕ್ಕೆ 5 ದಿನ. | ಹೆಚ್ಚುವರಿಯಾಗಿ ಹಾಲಿನ ಪುಡಿ 20 ಗ್ರಾಂ. ನಂತೆ ವಾರಕ್ಕೆ 3 ದಿನದಂತೆ ಒಟ್ಟಾರೆ 540 ಗ್ರಾಂ. ಪ್ರತೀ ಮಾಹೆಗೆ ಮನೆಗೆ ವಿತರಣೆ. | ಕಬ್ಬಿಣಾಂಶದ ಮಾತ್ರೆ, ಜಂತು ಹುಳುವಿನ ಮಾತ್ರೆ |
| | ತೀವ್ರ ಅಪೌಷ್ಠಿಕ ಮಗು | 6.00 | 6.00 | 12.00 | 6.00 * 20 ದಿನ (120/-) | 5.12 * 20 + 12 ದಿನ (163.84/-) | 283.84 | 120 ಗ್ರಾಂ. ನಂತೆ ಪುಷ್ಟಿ ಪುಡಿಯನ್ನು ಪ್ರತಿ ದಿನದಂತೆ ಒಟ್ಟು 3.00 ಕೆ.ಜಿ. ಮನೆಗೆ ವಿತರಿಸಲಾಗುತ್ತಿದೆ. | 80 ಗ್ರಾಂ. ನಂತೆ ಪುಷ್ಟಿ ಪುಡಿಯನ್ನು ಪ್ರತಿ ದಿನದಂತೆ ಒಟ್ಟು 2.00 ಕೆ.ಜಿ. ಮನೆಗೆ ವಿತರಿಸಲಾಗುತ್ತಿದೆ. | | ವಾರಕ್ಕೆ 03 ದಿನ | ಪ್ರತಿ ದಿನಕ್ಕೆ 15 ಗ್ರಾಂ. + ವಾರಕ್ಕೆ 5 ದಿನ | | ಕಬ್ಬಿಣಾಂಶದ ಮಾತ್ರೆ, ಜಂತು ಹುಳುವಿನ ಮಾತ್ರೆ |

# ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಒದಗಿಸುತ್ತಿರುವ ಆಹಾರದ ವಿವರ

| ಫಲಾನುಭವಿಗಳ ವಿವರ | ಆರೋಗ್ಯ ಸ್ಥಿತಿ | ಘಟಕ ವೆಚ್ಚ (ರೂ.ಗಳಲ್ಲಿ) | | | ರಾಜ್ಯ ಹೆಚ್ಚುವರಿ ವೆಚ್ಚ (ತಿಂಗಳಿಗೆ) (ರೂ.ಗಳಲ್ಲಿ) | | | ಒದಗಿಸಲಾಗುತ್ತಿರುವ ಆಹಾರ ಪದಾರ್ಥಗಳ ವಿವರ | | | | | | |
|---|---|---|---|---|---|---|---|---|---|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು | ಕೋಳಿ ಮೊಟ್ಟೆ | ಹಾಲು | ಒಟ್ಟು (ರೂ.ಗಳಲ್ಲಿ) | ಪೂರಕ ಪೌಷ್ಠಿಕ ಆಹಾರ | ಹೆಚ್ಚುವರಿ | ಸೃಷ್ಟಿ ಯೋಜನೆಯಡಿ ಕೋಳಿಮೊಟ್ಟೆ | ಹೆಚ್ಚುವರಿ | ಕ್ಷೀರಭಾಗ್ಯ ಯೋಜನೆಯಡಿ ಹಾಲು | ಹೆಚ್ಚುವರಿ | ಇತರೆ |
| 3 ರಿಂದ 6 ವರ್ಷದ ಮಕ್ಕಳು | ಸಾಮಾನ್ಯ ಪೌಷ್ಠಿಕ ಮಗು | 4.00 | 4.00 | 8.00 | 6.00 * 8 ದಿನ | 5.12*20 ದಿನ | 150.40 | ಬೆಳಗ್ಗೆ- 40 ಗ್ರಾಂ ಗೋಧಿ ಲಾಡು ಅಥವಾ ಮಿಲ್ಲೆಟ್ ಲಾಡು ಮಧ್ಯಾಹ್ನ- 90 ಗ್ರಾಂ ಅನ್ನ ಸಾಂಬಾರ್(3 ದಿನ) 90 ಗ್ರಾಂ.ಉಪ್ಪಿಟ್ಟು (2 ದಿನ) 90 ಗ್ರಾಂ ರವಾ ಪಾಯಸ(1 ದಿನ). | | ವಾರಕ್ಕೆ 02 ದಿನ | | ಪ್ರತಿ ದಿನಕ್ಕೆ 150 ಎಂ.ಎಲ್. ನಂತೆ ವಾರಕ್ಕೆ 5 ದಿನ ಅಂಗನವಾಡಿಯಲ್ಲಿ ಹಾಲು ವಿತರಣೆ | | ಕಬ್ಬಿಣಾಂಶದ ಮಾತ್ರೆ, ಜಂತು ಹುಳುವಿನ ಮಾತ್ರೆ |
| | ಸಾಧಾರಣ ಅಪೌಷ್ಠಿಕ ಮಗು (MAM) | 4.00 | 4.00 | 8.00 | 6.00 * 20 ದಿನ | 5.12 * 20 + 12 ದಿನ | 283.84 | | ---- | ವಾರಕ್ಕೆ 02 ದಿನ | ಹೆಚ್ಚುವರಿ 03 ದಿನ. | ಪ್ರತಿ ದಿನಕ್ಕೆ 150 ಎಂ.ಎಲ್. ನಂತೆ ವಾರಕ್ಕೆ 5 ದಿನ ಹಾಲು ವಿತರಣೆ | ಹೆಚ್ಚುವರಿಯಾಗಿ ಹಾಲಿನ ಪುಡಿ 20 ಗ್ರಾಂ. ನಂತೆ ವಾರಕ್ಕೆ 3 ದಿನದ ಪ್ರಮಾಣ ಸೇರಿ 220 ಗ್ರಾಂ. ಮನೆಗೆ ವಿತರಣೆ | ಕಬ್ಬಿಣಾಂಶದ ಮಾತ್ರೆ, ಜಂತು ಹುಳುವಿನ ಮಾತ್ರೆ |

# ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಒದಗಿಸುತ್ತಿರುವ ಆಹಾರದ ವಿವರ

| ಫಲಾನುಭವಿಗಳ ವಿವರ | ಆರೋಗ್ಯ ಸ್ಥಿತಿ | ಘಟಕ ವೆಚ್ಚ (ರೂ.ಗಳಲ್ಲಿ) | | | ರಾಜ್ಯ ಹೆಚ್ಚುವರಿ ವೆಚ್ಚ (ತಿಂಗಳಿಗೆ) (ರೂ.ಗಳಲ್ಲಿ) | | | ಒದಗಿಸಲಾಗುತ್ತಿರುವ ಆಹಾರ ಪದಾರ್ಥಗಳ ವಿವರ | | | | | | |
|---|---|---|---|---|---|---|---|---|---|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು | ಕೋಳಿ ಮೊಟ್ಟೆ | ಹಾಲು | ಒಟ್ಟು (ರೂ.ಗಳಲ್ಲಿ) | ಪೂರಕ ಪೌಷ್ಟಿಕ ಆಹಾರ | ಹೆಚ್ಚುವರಿ | ಸೃಷ್ಟಿ ಯೋಜನೆಯಡಿ ಕೋಳಿಮೊಟ್ಟೆ | ಹೆಚ್ಚುವರಿ | ಕ್ಷೀರಭಾಗ್ಯ ಯೋಜನೆಯಡಿ ಹಾಲು | ಹೆಚ್ಚುವರಿ | ಇತರೆ |
| **3 ರಿಂದ 6 ವರ್ಷದ ಮಕ್ಕಳು** | ತೀವ್ರ ಅಪೌಷ್ಟಿಕ ಮಗು (SAM) | 6.00 | 6.00 | 12.00 | 6.00 * 20 ದಿನ | 5.12 * 20 + 12 ದಿನ | 283.84 | ಬೆಳಗ್ಗೆ- 40 ಗ್ರಾಂ ಗೋಧಿ ಲಾಡು ಅಥವಾ ಮಿಲ್ಲೆಟ್ ಲಾಡು ಮಧ್ಯಾಹ್ನ- 90 ಗ್ರಾಂ ಅನ್ನ ಸಾಂಬಾರ್(3 ದಿನ) 90 ಗ್ರಾಂ.ಉಪ್ಪಿಟ್ಟು (2 ದಿನ) 90 ಗ್ರಾಂ ರವಾ ಪಾಯಸ(1 ದಿನ). | ಹೆಚ್ಚುವರಿಯಾಗಿ ಪ್ರತಿದಿನ 80 ಗ್ರಾಂಗಳಂತೆ ಒಟ್ಟು 25 ದಿನಗಳಿಗೆ 2.00 ಕೆ.ಜಿ ಪುಷ್ಟಿಯನ್ನು ಮನೆಗೆ ವಿತರಿಸಲಾಗುತ್ತಿದೆ. | ವಾರಕ್ಕೆ 02 ದಿನ | ಹೆಚ್ಚುವರಿ 03 ದಿನ. | ಪ್ರತಿ ದಿನಕ್ಕೆ 150 ಎಂ.ಎಲ್. ನಂತೆ ವಾರಕ್ಕೆ 5 ದಿನ ಅಂಗನವಾಡಿಯಲ್ಲಿ ಹಾಲು ವಿತರಣೆ | | ಕಬ್ಬಿಣಾಂಶದ ಮಾತ್ರೆ, ಜಂತು ಹುಳುವಿನ ಮಾತ್ರೆ |